ರಾಜೇಂದ್ರ ಇಂಗಳಗಿ, ರಾಮದುರ್ಗ

*ಇಲ್ಲೊಬ್ಬಳು ಕನಸಿನಲ್ಲಿ ನನ್ನ ಕತ್ತು ಹಿಸುಕಿದಳಲ್ಲಾ...?*



ಹುಚ್ಚಪ್ಪ; ಅದು ಕನಸಿನಲ್ಲಿ ಹಿಸುಕಿದ್ದಲ್ಲ; ಮಲಗುವಾಗ ಟೈ ಬಿಚ್ಚಿಡದೆ ನಿದ್ರೆಯಲ್ಲಿ ಬಿಗಿದುಕೊಂಡುದರ ಪ್ರಭಾವ.

ನೇರಲಗುಡ್ಡ ಶಿವಕುಮಾರ್, ಶಿರಾ

*ಸಾರಾಯಿಗೂ, ವಿಸ್ಕಿಗೂ ಇರುವ ವ್ಯತ್ಯಾಸವೇನು?*

ಸಾರಾಯಿಯದು ಬಾಟ್ಲು ಚಿಕ್ಕದಾದರೂ ಕಿಕ್ಕು ದೊಡ್ಡದು.

ಸುನಂದ ಲೋಕೇಶ್‌ರೆಡ್ಡಿ, ದಾವಣಗೆರೆ

*ಹೀರೋಗಳೇ ಧೂಮಪಾನ, ಮದ್ಯಪಾನ ಮಾಡಿದರೆ ಸಾಮಾನ್ಯ ಜನರ ಪಾಡೇನು ಸಾರ್...?*

ಹೀರೋನ ಸದ್ಗುಣಗಳನ್ನು ಮಾತ್ರ ಬೆಳೆಸಿಕೊಂಡರೆ ಏನೇನೂ ಬಾಧೆಯಾಗದು.

ಡ್ರೈರಿ ವಿಶ್ವನಾಥ್, ಬೆಂಗಳೂರು

*ಊಟದ ರುಚಿ ಎಲ್ಲಿಂದ ಬರುತ್ತದೆ?*

ತುಟಿಯಿಂದ ಹಿನ್ನಾಲಿಗೆಯವರೆಗೆ ಬರುತ್ತದೆ. ನಂತರ ಗಿಣ್ಣೂ ಒಂದೇ, ಮಣ್ಣೂ ಒಂದೇ.

ಜಾಕಬ್ ಡಿಸೋಜ, ಕುರುವಳ್ಳಿ

*ಈಗ ಎಚ್ಚರವಾಯಿತು. ಇನ್ನು ಮಲಗಲೆ?*



ಕ್ಷಮಿಸಿ. ನೀರು ಕುಡಿಯಲೆಂದು ಭಾಷಣ ನಿಲ್ಲಿಸಿದ್ದೆ. ಇನ್ನು ಮುಂದುವರೆಸುತ್ತೇನೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಸಂಕಟ ಬಂದಾಗ ವೆಂಕಟರಮಣ. ವೆಂಕಟರಮಣನಿಗೇ ಸಂಕಟ ಬಂದರೆ?*

ನೈವೇದ್ಯದ ವಡೆ, ಲಡ್ಡುವಿನಲ್ಲಿ ದೋಷವಿರಬೇಕು. ಕೂಡಲೆ ಬಾಣಸಿಗನನ್ನು ಬದಲಾಯಿಸಿ!

ಕೆ.ವಿ.ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಮೋಕ್ಷಕ್ಕೂ, ಕಪಾಳಮೋಕ್ಷಕ್ಕೂ ಇರುವ ವ್ಯತ್ಯಾಸವೇನು?*

ಭಕ್ತಿ ಇಟ್ಟರೆ ಮೋಕ್ಷ; ಬತ್ತಿ ಇಟ್ಟರೆ ಕಪಾಳಮೋಕ್ಷ.

ಓಂಚನ್ನೇಶ್, ಅರಬಿಳಚಿ ಕ್ಯಾಂಪ್

*ರಂಭೆ, ಊರ್ವಶಿಯರೇಕೆ ಈಗಿನ ಸನ್ಯಾಸಿಗಳನ್ನು ಕಾಡುವುದಿಲ್ಲ?*

ಸಿಕ್ಕಿಹಾಕಿಕೊಂಡರೆ ನ್ಯೂಸ್ ಚಾನಲ್‌ಗಳು ಉಜ್ಜೀ ಉಜ್ಜೀ ತೋರಿಸೋದ್ರಿಂದ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಹುಲಿಯನ್ನು ಕೊಂದು ಅದರ ಚರ್ಮವನ್ನು ಉಡುಗೆಯಾಗಿ ಧರಿಸಿರುವ ಪರಮಾತ್ಮ ಕರುಣಾಮಯಿ ಹೇಗೆ ಆಗುತ್ತಾನೆ?*

ಅದು ಕೊಂದದ್ದಲ್ಲ; ಶಿವೆಯ ವಾಹನ ಸ್ಕ್ರ್ಯಾಪ್ ಆದಾಗ ಅದರ ಸ್ಪೇರ್ ಪಾರ್ಟ್ ಆದ ಚರ್ಮವನ್ನು ದೇವ ಬಳಸಲು ಇಟ್ಟುಕೊಂಡನಷ್ಟೆ.

ಉಷಾ ಸೋಗಲ್, ತುರಹಳ್ಳಿ

*ಒಳ್ಳೆಯವರಿಗಿಂತ ಕೆಟ್ಟವರೇ ಹೆಚ್ಚು ಸುಖವಾಗಿರುತ್ತಾರಲ್ಲಾ...?*

ಅದು ಹಾಗೆಯೇ; ದುರ್ಯೋಧನನಿಗೆ ತಿಳಿದಿದ್ದಷ್ಟು ಆರ್ಟ್ ಆಫ್ ಲಿವಿಂಗ್ ಧರ್ಮರಾಯನಿಗೆ ತಿಳಿದಿರಲಿಲ್ಲ.

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ಓದು, ಬರಹ ವಿದ್ಯಾರ್ಥಿಗಳ ಹಣೆಬರಹವನ್ನೇ ಬದಲಾಯಿಸಿಬಿಡುತ್ತದಂತೆ, ಹೌದೆ?*

ನಿಜ. ಎಷ್ಟೇ ಓದಿದರೂ ಸೈನ್ಸ್, ಮ್ಯಾಥ್ಸ್ ಅರ್ಥವಾಗದೆ ಹಣೆಹಣೆ ಚಚ್ಚಿಕೊಳ್ಳುವುದರಿಂದ ಹಣೆಯಲ್ಲಿನ ಬರಹ ಬದಲಾಗುವುದಂತೆ!

ಕೆ.ಎಂ. ಲಿಂಗರಾಜು, ನಂಜನಗೂಡು

*ಫೇಸ್‌ಬುಕ್ಕಿಗೂ, ಪಠ್ಯಪುಸ್ತಕಕ್ಕೂ ಏನು ವ್ಯತ್ಯಾಸ?*

ಫೇಸ್‌ಬುಕ್ ಎಂದರೆ ಲೈಕ್ ಹೆಚ್ಚು, ಟೆಕ್ಸ್ಟ್‌ಬುಕ್ ಎಂದರೆ ಡಿಸ್‌ಲೈಕ್ ಹೆಚ್ಚು.

ಡಾ. ವಿನಯ ಶ್ರೀನಿವಾಸ್, ಶಿವಮೊಗ್ಗ

*ಅರ್ಥವನ್ನೇ ಅರಿಯದೆ ಭಗವಂತನ ಸ್ತೋತ್ರ, ಶ್ಲೋಕಗಳನ್ನು ದಿನವೂ ಪಠಿಸಿದರೆ ಫಲವಿದೆಯೆ?*

ಅಷ್ಟು ಸಮಯವಾದರೂ ಅನಗತ್ಯ, ಅನುಚಿತ ಯೋಚನೆಗಳಿಂದ ಮುಕ್ತವಾಗಿರುತ್ತೀವಲ್ಲ, ಅದೇ ದೊಡ್ಡ ಫಲ.

## ಬಹುಮಾನಿತ ಪ್ರಶ್ನೆ

ಕುಮಾರ ಚಲವಾದಿ, ಹೊಳೆನರಸಿಪುರ

*ಅಂದಿನ ಹರಿಶ್ಚಂದ್ರನಿಗೆ ಈಗಿನ ರಾಜಕಾರಣಿಗಳು ಸಲಹೆಗಾರರಾಗಿದ್ದದ್ದರೆ...?*

ಕಥೆಯ ಟೈಟಲ್ ಛೇಂಜ್ ಆಗುತ್ತಿತ್ತು – 'ಸತ್ಯ ಹರಿಶ್ಚಂದ್ರ'ದ ಬದಲು 'ರಾಜ ಹರಿಶ್ಚಂದ್ರ ಮತ್ತು ನಲವತ್ತು ಮಂದಿ ಕಳ್ಳರು'!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಅಲ್ರಣ್ಣ, ಋತುಗಳ ರಾಜ ವಸಂತ ಅಂತೆ; ಋತುಗಳ ರಾಣಿ ಯಾರು?*

ವಸಂತ ನಗುವುದಕ್ಕೆ ಕಾರಣವಾದ ವರ್ಷಋತು.

ಕೆ.ಜಿ. ರಾಮಪ್ರಸಾದ್, ಕಡೂರು

*ನಮ್ಮ ಬುದ್ಧಿವಂತರೇ ಹೆಚ್ಚಾಗಿ ನಿರುದ್ಯೋಗಿಗಳಾಗಿರಲು ಕಾರಣವೇನು?*

ಉದ್ಯೋಗ ಹಿಡಿಯಲು ಬೇಕಾದ ಬುದ್ಧಿ ಇಲ್ಲವಾದ್ದರಿಂದ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ಮಳೆ ಆದ್ರೆ ಒಳ್ಳೆ ಬೆಳೆ. ಮದುವೆಯಾದರೆ?*



ಸ್ವಲ್ಪ ದಿನಗಳ ಮಟ್ಟಿಗಾದರೂ ಒಳ್ಳೆಯ ಕಳೆ.

ಎನ್. ವಸಂತಾ, ಕತ್ತರಗುಪ್ಪ

*ಪುಸ್ತಕವಿಲ್ಲದ ಮನೆಗೂ, ಕಿಟಕಿಯಿಲ್ಲದ ಕೊಠಡಿಗೂ ವ್ಯತ್ಯಾಸವೇನು?*

ಒಂದು all electronic home, ಇನ್ನೊಂದು ಪುರಾತನ ಕಾಲದಿಂದಲೂ ಪವಿತ್ರವಾದ ಗರ್ಭಗುಡಿ.

ಮಹಾಂತಯ್ಯಾ ಕೆ. ಮಠ, ಬಂದರವಾಡ

*ಕನ್ನಡ ಕಲಿಕೆಗೂ, ಇಂಗ್ಲಿಷ್ ಕಲಿಕೆಗೂ ಇರುವ ವ್ಯತ್ಯಾಸವೇನು?*

ಕನ್ನಡವೆಂದರೆ ಅಲ್ಪ ಪ್ರಾಣ, ಇಂಗ್ಲಿಷ್ ಎಂದರೆ ಮಹಾ ಪ್ರಾಣ.

■ ರಾಮ್